IRREGULARITIES COMMITTED BY MYSORE POWER LOOM SILK MANUFACTURERS' CO-OPERATIVE SOCIETY LTD.

818. Sri T. R. SHAMANNA (Fort).—

Will the Minister for Co-operation be pleased to state:—

(*a*) whether they are aware that there is a society called "The Mysore Power Loom Silk Manufacturers Co-operative Society Ltd., Avenue Road, Bangalore";

(*b*) whether it is a fact that the books of this society were seized by the Registrar of Co-operative Societies;

(*c*) whether the accounts of the society were written up-to-date;

(*d*) whether grave irregularities were noticed in the working of the Society;

(*e*) the steps that are proposed to be taken to set right the administration of this Society so as to serve the purpose for which it is started ?

Sri A. SHANKARA ALVA (Minister for Co-operation).—

(*a*) Yes.

(*b*) Yes. Only relevant ones were seized.

(*c*) Yes.

(*d*) Yes.

(*e*) Necessary action is being taken.

ಶ್ರೀ ಟಿ. ಆರ್. ಶಾಮಣ್ಣ.—ಈ ಸೊಸೈಟಿ ಬಗ್ಗೆ ಸಾಕಾದಷ್ಟು ದೂರುಗಳು ಬಂದಿವೆ, ಇದರ ಬಗ್ಗೆ ಪೂರ್ಣವಾಗಿ ತನಿಖೆ ಮಾಡಿ ಬೇಗನೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

†ಶ್ರೀ ಎ. ಶಂಕರ ಆಳ್ವಾ.—ಈಗಾಗಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಇಲ್ಲಿನ ಡಾಕ್ಯುಮೆಂಟುಗಳನ್ನು ಸೀಜ್ ಮಾಡಿದ್ದಾರೆ, ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

9-30 A. M.

ಶ್ರೀ ಟಿ. ಆರ್. ಶಾಮಣ್ಣ.—ಎಲ್ಲ ಎಂ. ಎಲ್. ಎ. ಗಳಿಗೂ ಈ ಸೊಸೈಟಿಯ ಬಗ್ಗೆ ಕೆಲವು ವಿಚಾರಗಳನ್ನು ಪಟ್ಟಮಾಡಿ ಕಳುಹಿಸಿದ್ದಾರೆ. ತಮ್ಮ ಕಡೆಗೆ ಅದನ್ನು ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎ. ಶಂಕರ ಆಳ್ವಾ.—ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ಇಲ್ಲಿನ ಸೊಸೈಟಿ ಮೇಲೆ ದೂರುಗಳು ಯಾವಾಗ ಬಂತು? ಯಾರ್ಯಾರ ಮೇಲೆ ಇದುವರೆಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಇನ್ನೆಷ್ಟು ವರ್ಷಗಳ ಕಾಲ ಇಲ್ಲಿನ ದೂರನ್ನು ತನಿಖೆ ಮಾಡಲು ಅವಕಾಶ ಬೇಕು?

ಶ್ರೀ ಎ. ಶಂಕರ ಆಳ್ವಾ.—ದೂರುಗಳು ಬಂದಕೂಡಲೇ ತನಿಖೆ ಮಾಡುತ್ತೇವೆ ಮತ್ತು ಇಲ್ಲಿ ಈಗಾಗಲೇ ಡೆಪ್ಯುಟಿ ರಿಜಿಸ್ಟ್ರಾರ್‌ರವರು ತನಿಖೆ ಮಾಡುತ್ತಿದ್ದಾರೆ. ಅವರ ರಿಪೋರ್ಟು ಬಂದ ಕೂಡಲೇ ಪರಿಶೀಲಿಸುತ್ತೇವೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಮತ್ತು ದೊಡ್ಡಬಳ್ಳಾಪುರ ಇಂತ ಹದೇ ಕೈಗಾರಿಕೆ ಉದ್ಯಮ ಮಾಡುವ ಸೊಸೈಟಿಗಳು ಅನೇಕ ಇವೆ, ಇದೇ ತರಹ ಅಲ್ಲಿನ ಲಿಕ್ಕ ಪತ್ರಗಳು ಸರಿಯಾಗಿಲ್ಲದೇ ಇರುವಂತಹ ಸ್ಥಿತಿಗಳಿವೆ ಮತ್ತು ಹಣದ ದುರುಪಯೋಗಗಳೂ ಆಗಿವೆ, ನಾನೇ ಇದೇ ದೊಡ್ಡಬಳ್ಳಾಪುರದ ಸೊಸೈಟಿ ಬಗ್ಗೆ ಲಿಖಿತ ರೂಪದಲ್ಲಿ ತನಿಖೆ ಮಾಡಬೇಕೆಂದು ತಮಗೆ ಕೊಟ್ಟು ತಕ್ಕ ಕ್ರಮ ತೆಗೆದು ಕೊಳ್ಳಬೇಕೆಂದೂ ಹೇಳಿದ್ದೆ. ಇದುವರೆಗೆ ಆ ಸೊಸೈಟಿಯ ಮೇಲೆ ಏನೂ ಕಾರ್ಯ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು?

ಶ್ರೀ ಎ. ಶಂಕರ ಆಳ್ವಾ.—ಆ ಸೊಸೈಟಿಯಿಂದಲೂ ರಿಕಾರ್ಡುಗಳನ್ನು ತರಿಸಿ ಕೂಡಲೇ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತನಿಖೆ ಮಾಡಬೇಕೆಂದು ಮಾನ್ಯ ಸದಸ್ಯರೇ ಸೊಸೈಟಿಯ ಎಲ್ಲ ವಿವರಗಳನ್ನೂ ಸರಕಾರಕ್ಕೆ ಕೊಟ್ಟಾಗಲೂ ಇದುವರೆಗೆ ಏಕೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ?

ಶ್ರೀ ಎ. ಶಂಕರ ಆಳ್ವಾ.—ಇದರ ರಿಕಾರ್ಡುಗಳನ್ನು ತರಿಸಿ ನೋಡುತ್ತೇನೆ.

ಶ್ರೀ ಜಿ. ರಾಮೇಗೌಡ.—ಈ ಒಂದು ಸೊಸೈಟಿಯ ಪ್ರಶ್ನೆ ಇಲ್ಲಿ ದೂರು ಬಂದಿದೆ ಎಂದು ಹೇಳಿರುವುದರಲ್ಲಿ ಒಬ್ಬರು ಪ್ರಮುಖ ವ್ಯಾಪಾರಿಗಳು ಎಂದರೆ ಶ್ರೀ ಬಿ. ಜಿ. ವೀರಣ್ಣ ಎನ್ನುವವರು ವಿಜಯ ಬ್ಯಾಂಕಿನಲ್ಲಿ ಒಬ್ಬರು ಡೈರೆಕ್ಟರು ಆಗಿದ್ದಾರೆ ಮತ್ತು ಅಲ್ಲಿರುವ ಬ್ಯಾಂಕಿನ ಚೇರ್ಮನ್ನರ ಪ್ರಭಾವವನ್ನುಪಯೋಗಿಸಿ

ಕೊಂಡು ಇದರ ಮೇಲೆ ಸಾಕಷ್ಟು ತೀರ್ಮಾನವಾಗದೇ ಇರುವಂತೆ ಮಾಡುತ್ತಿದ್ದಾರೆಂದು ಅನೇಕ ದೂರುಗಳು ಬಂದಿವೆ. ಇಂತಹ ಕೆಲವಾರು ಸೊಸೈಟಿಗಳು ನಮ್ಮಲ್ಲಿವೆ ಇದನ್ನು ಸರಿಯಾಗಿ ತನಿಖೆ ಮಾಡಲು ಸರಕಾರಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯಗಳೂ ಬರುತ್ತಿವೆ. ಇದನ್ನು ಸರಕಾರ ಗಮನಿಸಿದೆಯೇ ?

ಶ್ರೀ ಎ. ಶಂಕರ ಆಳ್ವಾ.—ಇದು ತಪ್ಪು ಅಭಿಪ್ರಾಯ, ಇವನ್ನೆಲ್ಲಾ ಪೂರ್ಣವಾಗಿ ತನಿಖೆ ಮಾಡಿ ನೋಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ನಮಗೆ ಈ ಸೊಸೈಟಿ ಚೆನ್ನಾಗಿ ನಡೆಯಬೇಕು ಎಂದು ಇರುವುದು ಮತ್ತು ಇದರಲ್ಲಿ ಯಾರ ಪ್ರಭಾವದ ಪ್ರಶ್ನೆಯೂ ಬರಬಾರದು. ಎರಡನೇದು ಇದಕ್ಕೆ ಸಂಬಂಧಪಟ್ಟ ದೂರುಗಳು ಬಂದಿರುವಾಗ ಇದರ ಬಗ್ಗೆ ನ್ಯಾಯವಾಗಿ ಇಲ್ಲಿರುವ ವಿವರುಗಳಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ ಮತ್ತು ಬೇಗನೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನೂ ಸರಕಾರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಶಂಕರ ಆಳ್ವಾ.—ನಾನಾಗಲೇ ಹೇಳಿದ ಹಾಗೆ ತನಿಖೆಗಾಗಿ ಏರ್ಪಾಡು ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ — ಇದೇ ತರಹ ದೊಡ್ಡಬಳ್ಳಾಪುರದಲ್ಲಿ ಒಂದು ಸೊಸೈಟಿ ಇದೆ, ಇದನ್ನು ಸೂಪರ್‌ಸೀಡ್ ಮಾಡಿ ಇದರಲ್ಲಿ ಏನು ಅವ್ಯವಸ್ಥೆಗಳಾಗಿವೆ ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎ. ಶಂಕರ ಆಳ್ವಾ.—ತಾವು ಹೇಳಿದಂತೆ ಅಲ್ಲಿನ ರಿಕಾರ್ಡುಗಳನ್ನು ತರಿಸಿ ನೋಡಿ ತನಿಖೆ ಮಾಡಿ ಸೂಪರ್‌ಸೀಡ್ ಮಾಡುವ ಅಗತ್ಯ ಇದ್ದರೆ ಅದನ್ನೂ ಮಾಡುತ್ತೇನೆ.

REPAIRS TO PRIMARY SCHOOL BUILDINGS IN KARWAR TOWN

916. Sri VIRUPAKSH M. GHADI (Haliyal).—

Will the Minister for Education be pleased to state :—

(*a*) whether it is a fact that no current repairs including monsoon repairs were effected to the primary schools lying within the limits of the Karwar Town since these primary schools were taken over by Government from ex-District School Board;